ಕರ್ನಾಟಕ ನಾಗರೀಕ ಸೇವಾ (ಗ್ರೂಪ್ –ಸಿ ಮತ್ತು ಗ್ರೂಪ್ – ಡ ಗುತ್ತಿಗೆ ಆಧಾರದ ನೌಕರರ ಸೇವೆಯನ್ನು ಸರ್ಕಾರದ ಸಚಿವಾಲಯದಲ್ಲಿ ವಲೀನಗೊಳಿಸುವ) (ವಿಶೇಷ) ನಿಯಮಗಳು, 2005 ರ ಕರಡಿಗೆ 534 ಆಕ್ಷೇಪಣೆಗಳು ಈ) ಸ್ವೀಕೃತವಾಗಿದ್ದವು. ಈ ಆಕ್ಷೇಪಣೆಗಳನ್ನು ಪರಶೀಲಿಸಿ, ಕರಡು ನಿಯಮಗಳನ್ನು ಅಂತಿಮಗೊಳಿಸಲಾಗಿದೆ. ಈ ನಿಯಮದಲ್ಲಿ ಗುತ್ತಿಗೆ ಆಧಾರದ ಮೇಲೆ 10 ವರ್ಷ ಸೇವೆ ಸಲ್ಲಿಸಿದವರು ಅಥವಾ ದಿನಾಂಕ 01–06–2004 ಕ್ಕಿಂತ ಮೊದಲು 10 ವರ್ಷಗಳ ಅವಧಿಯಲ್ಲಿ ಕನಿಷ್ಟ 2400 ದಿನಗಳ ಸೇವೆ ಸಲ್ಲಿಸಿದವರು ಮತ್ತು ದಿನಾಂಕ 27–02–2002 ರಂದು ಸೇವಯಲ್ಲಿದ್ದವರನ್ನು ಮಾತ್ರ ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಈ ಷರತ್ತುಗಳನ್ನು ಪೂರೈಸಿದವರನ್ನು ಮಾತ್ರ ಸಕ್ರಮಾತಿಗೆ ಪರಿಗಣಿಸಲಾಗಿದೆ.

ಇಲ್ಲ

ಉದ್ಭವಿಸುವುದಿಲ್ಲ.

5705. (6365) ಶ್ರೀ ಕೆ. ಜಿ. ಬೋಪಯ್ಯ (ಮಡಿಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮಡಿಕೇರಿ ನಗರಸಭೆಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ: (ವಿವರಗಳನ್ನು ನೀಡುವುದು):

ಆ) ಈ ಹುದ್ದೆಗಳನ್ನು ಇದುವರೆಗೂ ಭರ್ತಿ ಮಾಡದಿರಲು ಕಾರಣಗಳೇನು:

ಇ) ಹುದ್ದೆಗಳ ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು:

ಶ್ರೀ ಧರ್ಮಸಿಂಗ್, ಮಾನ್ಯ ಮುಖ್ಯ ಮಂತ್ರಿಗಳು

ಅ) 57 ಹುದ್ದೆಗಳು ಖಾಲಿ ಇವೆ.

ಪೌರ ಕಾರ್ಮಿಕರು	14
ಲೋಡರ್ಸ್	16
ಕಿರಿಯ ಅಭಿಯಂತರರು	03
ಆರೋಗ್ಯ ಪರಿವೀಕ್ಷಕರು	03
ಸಹಾಯಕ ಪಂಪ್ ಆಪರೇಟರ್	06
ಇತರೆ	15

ಆ) ಈಗಾಗಲೇ ಅಕೌಂಟೆಂಟ್, ಕಿರಿಯ ಅಭಿಯಂತರರು (ಸಿವಿಲ್ ಹಾಗೂ ಎಲೆಕ್ಟ್ರಿಕಲ್) ಮತ್ತು ಪರಿಸರ ಅಭಿಯಂತರರ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗ ಮುಖಾಂತರ ಆಯ್ಕೆ ಪಟ್ಟಿಯನ್ನು ಪಡೆಯಲಾಗಿದ್ದು, ಸದರಿ ಅಭ್ಯರ್ಥಿಗಳ ನೇಮಕಾತಿ ಮಾಡುವುದು ಪ್ರಕ್ರಿಯೆಯಲ್ಲಿರುತ್ತದೆ. ಅಲ್ಲದೆ ಆರೋಗ್ಯ ಪರಿವೀಕ್ಷಕರ ಹಾಗೂ ಇನ್ನುಳಿದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

5706. (6595) ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು, ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,